ಮೈಸೂರಿನಲ್ಲಿ ನಿರ್ಮಿಸಲಾದ ಕನ್ನಡ ಕಲಾಮಂದಿರ

೧೬೭೧. ಶ್ರೀ ಪಿ. ಎಂ. ಚಿಕ್ಕ ಬೋರಯ್ಯ (ಚಾಮರಾಜ).— ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಹುಣಸೂರು ರಸ್ತೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ಸಂದರ್ಭಕ್ಕೆ ಕನ್ನಡ ಕಲಾಮಂದಿರವನ್ನು ನಿರ್ಮಿಸಿದ ಉದ್ದೇಶವೇನು ?

ಆ) ಆ ಉದ್ದೇಶಕ್ಕೆ ತಕ್ಕ ಹಾಗೆ ಕಲಾಮಂದಿರದ ಬಳಕೆ ಆಗುತ್ತಿದೆಯೇ ?

ಇ) ಈ ಕಲಾ ಮಂದಿರ ಉಪಯೋಗಕಾರಿ ಆಗಿಲ್ಲವೆಂದು ಖಾಸಗಿ ಚಲನ ಚಿತ್ರ ರಂಗದ ಕೆಲವರಿಗೆ ಶಬ್ದ ಗ್ರಹಣ ಮುಂತಾದ ವಾಣಿಜ್ಯ ಕಾರ್ಯಗಳಿಗೆ ಗುತ್ತಿಗೆಗೆ ಕೊಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರು).—

ಅ) ಮೈಸೂರು ನಗರದ ಸಾಂಸ್ಕೃತಿಕ ಮತ್ತು ರಂಗ ಚಟುವಟಿಕೆಗಳಿಗೆ ಪ್ರೋತ್ಸಾಹನ ನೀಡುವುದು

ಆ) ಹೌದು.

ಇ) ಇಲ್ಲ.

ಶ್ರೀ ಪಿ. ಎಂ. ಚಿಕ್ಕ ಬೋರಯ್ಯ.—ಅಧ್ಯಕ್ಷರೆ, ಕಲಾಮಂದಿರಕ್ಕೆ ಅಟ್ಯಾಚ್ ಆಗಿರತಕ್ಕಂಥ ಜನರಲ್ ಕ್ವಾರ್ಟರ್ಸ್ ಏನಿವೆ, ಅದನ್ನು ಖಾಸಗಿ ಚಲನಚಿತ್ರ ರಂಗದ ಕೆಲವರಿಗೆ ಕೊಟ್ಟಿರುವುದು ನಿಜವೆ? ಅದರಲ್ಲಿಯೂ ಕೂಡ ಏರಕಂಡಿಶನ್ ಜನರಲ್ ಕ್ವಾರ್ಟರ್ಸ್ ಎಷ್ಟಿದೆ ? ಅದನ್ನು ಹೀಗೆ ಖಾಸಗೀಯರವರಿಗೆ ಕೊಟ್ಟಿರುವುದು ನಿಜವೆ ? ಕಲಾಮಂದಿರಕ್ಕೆ ಸೇರಿದ ಕಟ್ಟಡಗಳಲ್ಲಿ ವಿಶ್ವ ಕನ್ನಡ ಸಾಂಸ್ಕೃತಿಕ ಕೇಂದ್ರವನ್ನು ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ ಅದು ಇನ್ನೂ ಕಾರ್ಯಗತವಾಗಿಲ್ಲ ಇನ್ನು ಮೇಲಾದರೂ ಮಾಡಲಿಕ್ಕೆ ಪ್ರಯತ್ನ ಮತ್ತು ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರು ಕೇಳಿದ ವಿಚಾರ ಈ ಪ್ರಶ್ನೆಗೆ ನೇರವಾಗಿ ಸಂಬಂಧ ಪಟ್ಟಿದ್ದದು ಅಲ್ಲ ಅವರು ಪ್ರಶ್ನೆ ಕೇಳಿರತಕ್ಕಂಥದ್ದು ಕಲಾ ಮಂದಿರದ ಬಗ್ಗೆ. [illegible] ಅಲ್ಲಿರತಕ್ಕಂಥ ಕಟ್ಟಡಗಳು ಏನಿವೆ, ಅವುಗಳ ಕಲಾಮಂದಿರಕ್ಕೆ ಸಂಬಂಧಪಟ್ಟಿದ್ದಲ್ಲ. ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಆ ಕಟ್ಟಡಗಳನ್ನು ಬೇರೆ ಬೇರೆಯವರಿಗೆ ಬಾಡಿಗೆಗೆ ಕೊಟ್ಟಿರಬಹುದು. ಈಗಲೂ ಬಾಡಿಗೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆ. ಹೀಗೆ ಬಾಡಿಗೆಗೆ ತೆಗೆದುಕೊಂಡವರಲ್ಲಿ ಚಲನ ಚಿತ್ರರಂಗದವರು ಇದ್ದಿರಬಹುದು. ಹಾಗೆಯೇ ಅನೇಕ ಸಂಸ್ಥೆಗಳಲ್ಲಿ [illegible] ಕೂಡ ಬಾಡಿಗೆಗೆ ತೆಗೆದುಕೊಂಡಿದ್ದಾರೆ. ವಿಶ್ವ ಕಲಾ ಕೇಂದ್ರವನ್ನು ಸ್ಥಾಪಿಸುವ ಆಶ್ವಾಸನೆಯನ್ನು ಕೊಟ್ಟಿಲ್ಲ. ಹಾಗೆಯೇ ಆ ಕುರಿತು ಯೋಜನೆಯೂ ಕೂಡ ಸರಕಾರದ ಮುಂದೆ ಇಲ್ಲ.

ಮೈಸೂರು ಮಹಾನಗರಪಾಲಿಕೆಯ ಆರೋಗ್ಯ ಇನ್ಸ್‌ಪೆಕ್ಟರ್‌ಗಳು

೧೫೩೦. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಮೈಸೂರು ನಗರಪಾಲಿಕೆಯಲ್ಲಿ ಎಷ್ಟು ಮಂದಿ ಹಿರಿಯ ಮತ್ತು ಕಿರಿಯ ಆರೋಗ್ಯ ಇನ್ಸ್‌ಪೆಕ್ಟರ್‌ಗಳಿದ್ದಾರೆ ?

೨) ಇವರುಗಳು ಮೈಸೂರು ನಗರಪಾಲಿಕೆಯಲ್ಲಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ?

೩) ಇವರುಗಳು ಒಂದು ಬಾರಿ ವರ್ಗವಾಗಿ ಮತ್ತೆ ಅದೇ ಸ್ಥಳಕ್ಕೆ ವರ್ಗ ಮಾಡಿಸಿಕೊಂಡು ಬಂದವರ ಸಂಖ್ಯೆ ಎಷ್ಟು ?